SRI C. M. ARUMUGHAM.—What is autonomous ? After all the Commissioner is a Government Servant. They have made all illegal things What are you talking ? They want to occupy the entire Corporation area.

(INTERRUPTION)

MR. SPEAKER.—You know what is autonomous.

(INTERRUPTION)

SRI C. M. ARUMUGHAM.—Don't bring all these autonomous and all. that We know what is autonomous.

(INTERRUPTION)

MR. SPEAKER.—Mr. Arumugham, let him answer.

ಶ್ರೀ ಧರ್ಮಸಿಂಗ್.—ಯಾವಾಗಲೂ ಕಾರ್ಪೊರೇಷನ್ ಅಧಿಕಾರಿಗಳಿಗೆ ಕೊಡಬೇಕೆಂದು ಕ್ವಾರ್ಟರ್ಸ್ ಗಳನ್ನು ಕಾರ್ಪೊರೇಷನ್ನವರು ಏನೂ ಕಟ್ಟಿಸಿಕೊಟ್ಟಿಲ್ಲ. ನಿಜವಿನೇ ಇಸವಿಯಲ್ಲಿ ಹೌಸಿಂಗ್ ಬೋರ್ಡಿನವರು ಈ ಕ್ವಾರ್ಟರ್ಸ್ಗಳನ್ನು ಕಟ್ಟಿಸಿ ಕಾರ್ಪೊರೇಷನ್ ಅಧಿಕಾರಿಗಳಿಗೆ ಅನುಕೂಲ ಮಾಡಿ ಕೊಡಬೇಕೆನ್ನುವ ದೃಷ್ಟಿಯಿಂದ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಸಮೂಹ ೧೦-೧೫ ವರ್ಷಗಳ ಹಿಂದೆ ಕಾರ್ಪೊರೇಷನ್ನಲ್ಲಿ ಎಲೆಕ್ಟೆಡ್ ಬಾಡಿ ಇದ್ದಾಗಲೇ ಒಂದು ರೆಜುಲೂಷನ್ ಮಾಡಿ ಸುಮಾರು ೨ ಸಾವಿರ ಮನೆಗಳನ್ನು ಪೌರಕಾರ್ಮಿಕರಿಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಭಾವನೆ ಬೇರೆ ರೀತಿ ಇದ್ದರೆ ನಾವು ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

SRI P. K. RANGANATH.—The quarters are not meant for employees. when the cost was at the present market rates there were applications and representations to the minister and the file was sent back to the Corporation. The file is pending before the corporation even today. when these houses are exclusively built for SCs and STs, till today no action has been taken to dispose of these quarters to them. when there is some influence immediately the houses have been disposed of. In williams Town, Frazer Town.....

MR. SPEAKER.—The question relates to 29 houses in Kumara park. Please resume your seat.

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಹೇಳುವಂತಹ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

Auction Conducted by the K.E.B.

503 Sri M.G. JARTARGHAR (Hubli)—Will the Minister of State for Power be pleased to state :—

(a) whether it has come to the notice of Government that scrap aluminium and copper wires are being sold once or twice every year through auction by the Karnataka Electricity Board;

(b) whether it is has come to the notice that the above materials were sold privately instead of in public auction; whether this is not a fact that the K.E.B. has incurred loss of lakhs of rupees due to such kind of illegal sale;

(c) Whether the Handicrafts Industrial Centre, Aralapet, Kolar is a recognised institution by the Central Governement or by the State Government;

(d) Whether it is not a fact that the above said Handicrafts Industrial Center, Kolar has Purchased Aluminium and Copper wires by giving private offer instead of Purchasing in public auction conducted by the K.E.B. and thereby has lead the K E.B. authorities to corruption;

(e) the articles manufactured by the above said instruction from out of the aluminium and copper wires and whether they have supplied them to Government at the fixed Price; if supplied what is its Price?

Sri G H. ASWATHA REDDY (Minister of State for Power)—

(a) Yes.

(b) No loss has been incurred to the Board as the sale was conducted as per tender-cum-auction rules of the Board.

(c) This question does not arise as the sale is being done in auction.

(d) Some institutions and private persons had come forward to buy the scrap. Out of them Handicrafts Centre, Kolar was one. As all these persons have given their consent to the rate fixed by the Board, Purchase orders have been given to all of them. There seems to be no underhand dealing in this affair.

(e) Does not arise.

ಶ್ರೀ ಎಂ. ಜಿ. ಜರತಾರಗರ.—ಮಾನ್ಯ ಅಧ್ಯಕ್ಷರೇ, ಕರಕುಶಲ ಕೈಗಾರಿಕಾ ಕೇಂದ್ರ ಆರಲಪೇಟೆ ಕೋಲಾರ ಇವರು ಹರಾಜಿನಲ್ಲಿ ಭಾಗವಹಿಸಿದ್ದು ನಿಜವೇ?

ಶ್ರೀ ಜಿ ಎಚ್. ಅಶ್ವತ್ಥರೆಡ್ಡಿ —ಮಾನ್ಯ ಅಧ್ಯಕ್ಷರೇ ಕೈಗಾರಿಕಾ ಕೇಂದ್ರ ಆರಲಪೇಟೆ ಕೋಲಾರ ಇವರು ಹರಾಜಿನಲ್ಲಿ ಭಾಗವಹಿಸಿದ್ದರು.

ಶ್ರೀ ಎಂ.ಜಿ. ಜರತಾರಗರ.—ಮಾನ್ಯ ಅಧ್ಯಕ್ಷರೇ ಆ ಹಣದ ಮೊತ್ತವೆಷ್ಟು?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಈ ಹರಾಜಿನಲ್ಲಿ ಸುಮಾರು ೬೦–೭೦ ಜನರು ಭಾಗವಹಿಸುತ್ತಾರೆ. ಆ ೬೦ ಜನರ ಹೆಸರುಗಳನ್ನು ತರಿಸುವುದಕ್ಕೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಏನೆಂದರೆ ಈ ಹರಾಜಿನಲ್ಲಿ ಬಂದ ಮೊತ್ತವೆಷ್ಟು?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಒಂದು ತಿಂಗಳಲ್ಲಿ ಎರಡು ಬಾರಿ ಹರಾಜು ಮಾಡಲಾಗುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯಿಂದ ತಾಮ್ರ, ಅಲ್ಯುಮಿನಿಯಂ ತಂತಿಗಳನ್ನು

ಹರಾಜು ಮಾಡಲಾಗುತ್ತದೆ. ಇದರಿಂದ ಸುಮಾರು ೩ ಕೋಟಿ ರೂಪಾಯಿಗಳು ಕೆ.ಇ.ಬಿ. ಮಂಡಲಿಗೆ ಬರುತ್ತದೆ. ಹರಾಜಿನಲ್ಲಿ ಯಾರು ಜಾಸ್ತಿ ಬಿಡ್ ಮಾಡುತ್ತಾರೆಯೋ ಅವರಿಗೆ ಕೊಡುತ್ತೇವೆ.

ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೇ ಅನೇಕ ಸಲ ಕೆ.ಇ.ಬಿ. ಇಲಾಖೆಯವರು ಬಿಡ್ ಮಾಡಿದ್ದಾರೆ. ಬಿಡ್ ಮಾಡಿದ ಫಿಗರ್ಸ್‌ಗಳಿಗೂ ಸೇಲ್ ಮಾಡಿದ ಫಿಗರ್ಸ್‌ಗಳಿಗೂ ವ್ಯತ್ಯಾಸವಿದೆ. ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಹರಾಜು ಯಾವ ರೀತಿ ಮಾಡಬೇಕೆಂದು ಒಂದು ನಿಯಮವಿದೆ. ಮೊದಲು ನಾವು ಟೆಂಡರ್ ಕರೆಯುತ್ತೇವೆ. ಪೇಪರಿನಲ್ಲಿ ಅಡ್ವರ್‌ಟೈಸ್ ಮಾಡುತ್ತೇವೆ. ಆ ನಂತರ ಹರಾಜು ಮಾಡುತ್ತೇವೆ. ಹರಾಜಿನಲ್ಲಿ ಯಾರು ಜಾಸ್ತಿ ಬಿಡ್ ಮಾಡುತ್ತಾರೆಯೋ ಅವರಿಗೆ ಕೊಡುತ್ತೇವೆ.

ಶ್ರೀ ಕೆ. ರಾಮಭಟ್.—ಮಾನ್ಯ ಮಂತ್ರಿಗಳಲ್ಲಿ ಯಾವ ಅಂಕಿಅಂಶಗಳೂ ಈಗ ಇಲ್ಲದಿರುವಾಗ ಯಾವ ಆಧಾರದ ಮೇಲೆ ಉತ್ತರ ಹೇಳುತ್ತಾರೆ. ಮತ್ತು ಇದರ ಬಗ್ಗೆ ಬೇಕಾದಷ್ಟು ಆರೋಪಗಳು ಇವೆ. ಇಲ್ಲಿ ಅವ್ಯವಹಾರ ನಡೆದಿದೆ ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಅವ್ಯವಹಾರ ನಡೆಯುವುದಕ್ಕೆ ಆಸ್ಪದವಿಲ್ಲ. ಹರಾಜಿನಲ್ಲಿ ಸುಮಾರು ೫೦ ಜನರು ಭಾಗವಹಿಸುತ್ತಾರೆ. ಹರಾಜಿನಲ್ಲಿ ಜಾಸ್ತಿ ಯಾರು ಬಿಡ್ ಮಾಡುತ್ತಾರೆಯೋ ಅವರಿಗೆ ಕೊಡಲಾಗುತ್ತದೆ. ಮಾನ್ಯ ಸದಸ್ಯರಿಗೆ ಏನಾದರೂ ಅಪನಂಬಿಕೆ ಇದ್ದರೆ ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಟ್ಟರೆ ವಿಚಾರ ಮಾಡಿಸುತ್ತೇನೆ.

SRI N.B. SIRDESAI: May I know whether the Government is aware of the fact that, as sufficient publication was not given for the auction sale' less offers were received and with the result KEB has been put to heavy loss?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ ತಿಂಗಳಿಗೆ ಎರಡು ಸಾರಿ ಹರಾಜು ಮಾಡುತ್ತಾರೆ. ಟೆಂಡರ್ ಕರೆಯುತ್ತಾರೆ. ಪತ್ರಿಕೆಯಲ್ಲಿ ಪಬ್ಲಿಷ್ ಮಾಡುತ್ತಾರೆ. ವಿಷಯ ಎಲ್ಲರಿಗೂ ಗೊತ್ತಾಗುತ್ತದೆ. ಆಗ ಹರಾಜಿನಲ್ಲಿ ಎಲ್ಲರೂ ಭಾಗವಹಿಸುತ್ತಾರೆ. 60 members have participated in the tender.

SRI N.B. SIRDESAI: It is observed that sufficient publicity has not been given.

ಅಧ್ಯಕ್ಷರು.—ಪತ್ರಿಕೆಗೆ ಏನಾದರೂ ಪಬ್ಲಿಷ್ ಮಾಡುವುದಕ್ಕೆ ಕೊಡುತ್ತೀರಾ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಪ್ರತಿಯೊಂದು ಕೂಡ ನಾವು ಪತ್ರಿಕೆಯಲ್ಲಿ ಪಬ್ಲಿಷ್ ಮಾಡುತ್ತೇವೆ.

ಶ್ರೀ ಎಂ.ಜಿ. ಜಗತಾರಗಾರ.—ಮಾನ್ಯ ಅಧ್ಯಕ್ಷರೇ ಟೆಂಡರ್ ಕರೆಯುತ್ತಾರೆ. ಪತ್ರಿಕೆಯಲ್ಲಿ ಪಬ್ಲಿಷ್ ಮಾಡುತ್ತಾರೆ. ಎಲ್ಲಾ ಮಾಡುತ್ತಾರೆ ಆದರೆ ಹರಾಜು ಮಾಡುವುದು ಮಾತ್ರ ಬಹಿರಂಗವಾಗಿ ಮತ್ತು ಆಂತರಂಗವಾಗಿ ಎಂದು ಎರಡು ರೂಪದಲ್ಲಿ ಮಾಡುತ್ತಾರೆ. ದಿನಾಂಕ ೨೪-೫-೧೯೮೦ರಲ್ಲಿ ಹರಾಜು ಯಾವ ರೀತಿ ನಡೆಯಿತು ಎಂಬುದು ತಮಗೆ ಗೊತ್ತಿದೆಯೇ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಹರಾಜು ಮಾಡಬೇಕಾದರೆ ಟೆಂಡರ್ ಕರೆಯುತ್ತೇವೆ ಪತ್ರಿಕೆಯಲ್ಲಿ ಪಬ್ಲಿಷ್ ಮಾಡುತ್ತೇವೆ. ಮತ್ತೇ ಹರಾಜಿನಲ್ಲಿ ಯಾರು ಬಿಡ್ ಮಾಡುತ್ತಾರೆಯೋ ಅವರು ಟೆಂಡರ್‌ಗಿಂತ ಜಾಸ್ತಿ ಇದ್ದರೆ ಮಾತ್ರ ಸಾಮಾನು ಒಪ್ಪಿಕೊಳ್ಳುತ್ತೇವೆ. ಕಡಿಮೆ ಇದ್ದರೆ ಒಪ್ಪಿಕೊಳ್ಳುವುದಿಲ್ಲ. ಆ ರೀತಿ ಏನಾದರೂ ತಪ್ಪಾಗಿದ್ದರೆ ಅದನ್ನು ಪರಿಶೀಲಣೆ ಮಾಡಿಸುತ್ತೇನೆ. ಮಾನ್ಯ ಸದಸ್ಯರಲ್ಲಿ ಏನಾದರೂ ಮಾಹಿತಿ ಇದ್ದರೆ ಕೊಡಬಹುದು.

ಶ್ರೀ ಎಂ.ಜಿ. ಜಗತಾರಗಾರ.—ಮಾನ್ಯ ಅಧ್ಯಕ್ಷರೇ ಪ್ರಾರಂಭದಲ್ಲಿಯೇ ವ್ಯಾಪಾರಸ್ಥರಿಗೆ ಕೊಟೇಷನ್ ಕರೆದು ಕೊಡುತ್ತಾರೆ. ಈ ರೀತಿ ಅಕ್ರಮಗಳು ನಡೆಯುತ್ತವೆ. ಇದಕ್ಕೆ ತಾವು ಏನು ಹೇಳುತ್ತೀರಿ.

ಶ್ರೀ ಜಿ.ಎಚ್. ಆನ್ವಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಕಾನೂನು ಬಿಟ್ಟು ಹರಾಜು ಮಾಡುವುದಕ್ಕಾಗುವುದಿಲ್ಲ. ಆ ರೀತಿ ಏನಾದರೂ ಅನ್ಯಾಯವಾಗಿದ್ದರೆ ಮಾನ್ಯ ಸದಸ್ಯರು ಮಾಹಿತಿ ಕೊಟ್ಟರೆ ತನಿಖೆ ಮಾಡಿಸುತ್ತೇನೆ.

Recruitment of Co-operative Employees in the State

551 SRI P. RAMDEV (Malleswaram).—Will the Minister for Ceration be pleased to state:—

(a) the norms framed by the Government for recruitment of staff of Co-operative Societies in the State;

(b) whether it has come to the notice of the Government that many of the Co-operative Societies particularly Societies in Bangalore are not following the norms;

(c) if so, the action taken against these Co-operative Societie for having made recruitment of staff voilating the norms?

SRI H.C. SRIKANTAIAH (Minister for Co-operation).—

(a) norms have been framed under section 128 (a) of the Co-operative Act, 1959 read with rule 17 of the Co-operative Societies, Rules, 1960 based on the requirements of the various Co-operative Societies. Besides instructions have been issued to the Co-operative Societies which are in receipt of financial assistance from Government to follow the reservation order while making recruitments.

1.	Scheduled Castes	15%
2.	Scheduled Tribes	3%
3.	Other Backward Classes, viz.,	
	1. Backward Communities	: 18%
	2. Backward Castes	: 10%
	3. Backward Tribes	: 5%
	4. Special Group	: 5%
	5. Physically handicapped	: 2%

(b) Yes.

(c) Government will take action against the Co-operative Societies where appointments have been made violating the norms.

ಶ್ರೀ ಪಿ. ರಾಂದೇವ್.—ನಮ್ಮ ರಾಜ್ಯದಲ್ಲಿರತಕ್ಕ ಸಹಕಾರ ಕ್ಷೇತ್ರದಲ್ಲಿ ನೇಮಕಗೊಂಡಿರತಕ್ಕ ಸಿಬ್ಬಂದಿ ಸಂಖ್ಯೆ ಎಷ್ಟು? ಅದರಲ್ಲಿ ಪರಿಶಿಷ್ಟ ಜಾತಿ ಪುತ್ತು ಹಿಂದುಳಿದ ವರ್ಗಕ್ಕೆ ಸೇರಿದವರು ಎಷ್ಟು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದಕ್ಕೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಿದರೆ ವಿವರವಾಗಿ ಉತ್ತರಿಸುತ್ತೇನೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಕೇಳುತ್ತಿರುವುದರಿಂದ ಅದಕ್ಕೆ ವಿವರವಾಗಿ ಉತ್ತರಿಸತಕ್ಕದ್ದು ಸರ್ಕಾರದ ಕರ್ತವ್ಯ.